ನವಸಾಕ್ಷರ ಪುಸ್ತಕ ಮಾಲೆ ೮೬

ವಚನಗಳು

ಓ. ಎಲ್. ನಾಗಭೂಷಣಸ್ವಾಮಿ

ಮಾತೆಂಬುದು
ಜ್ಯೋತಿರ್ಲಿಂಗ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಾಲೆ

ಯ

ಎಸ್.

ನಾಲಯ

ರು

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ – ೮೬

ವಚನಗಳು

ಓ.ಎಲ್.ನಾಗಭೂಷಣಸ್ವಾಮಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೭೭

VACHANAGALU : By O.L.NagabhushanaSwamy. Published by The Director of Prasaranga, Kannada University, Hampi - 583 211, KARNATAKA.
First Impression 1994, Pp.ii + 26, Rs. 8.00.

ಸಂಯೋಜನಾಧಿಕಾರಿ
ಡಾ.ಎಚ್.ಎಸ್.ಶ್ರೀಮತಿ
ಪತ್ರ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ — ೫೮೩ ೨೧೧

ಮುಖಪುಟ ವಿನ್ಯಾಸ
ಕೆ.ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು — ೫೬೦ ೦೦೪.

ವಚನಗಳು

ಎಂಟುನೂರು ವರುಷಗಳ ಹಿಂದೆ ಶಿವಶರಣರು ಒಂದು ಚಳವಳಿಯನ್ನು ನಡೆಸಿದರು. ಅದು ಕನ್ನಡನಾಡಿನಲ್ಲಿ ನಡೆದ ಒಂದು ದೊಡ್ಡ ಘಟನೆ. ಜಾತಿ ಜಾತಿಗಳ ನಡುವೆ ದ್ವೇಷವಿರಬಾರದು. ದುಡಿಮೆಗೆ ಗೌರವ ನೀಡಬೇಕು. ದುಡಿಯದೆ ಸುಖವಾಗಿರಬೇಕು ಎಂದು ಆಸೆ ಪಡಬಾರದು. ದೇವರು ದೇವಾಲಯಗಳಲ್ಲಿ ಇರುವುದಿಲ್ಲ. ಮಾನವನ ಮನಸ್ಸೇ ದೇವರು ಇರುವ ಜಾಗ. ಎಲ್ಲರೂ ತಿಳಿವಳಿಕೆಯನ್ನು ಸಂಪಾದಿಸಿಕೊಳ್ಳಬೇಕು. ಅರಿವು ನಿಜವಾದ ಗುರು. ಈ ಲೋಕದಲ್ಲಿ ನಾವು ಸರಿಯಾಗಿ ಬದುಕಬೇಕು. ಸ್ವರ್ಗ ನರಕಗಳು ಬೇರೆ ಎಲ್ಲೋ ಇಲ್ಲ. ಸರಿಯಾದ ರೀತಿಯಲ್ಲಿ ಬದುಕುವುದೇ ಸ್ವರ್ಗ. ಹದ ತಪ್ಪಿದ ಬಾಳು ನರಕ. ಈ ಸಂಗತಿಗಳನ್ನು ಶಿವಶರಣರು ತಿಳಿಸಿಕೊಟ್ಟರು.

ಶರಣರು ತಮ್ಮ ಮಾತುಗಳನ್ನು ವಚನಗಳ ರೂಪದಲ್ಲಿ ಹೇಳಿದ್ದಾರೆ. ವಚನಗಳು ತುಂಬ ಸರಳವಾಗಿ ನಮ್ಮ ಬದುಕಿಗೆ ಬೇಕಾದ ಮಾತುಗಳನ್ನು ಹೇಳುತ್ತವೆ. ಇದುವರೆಗೆ ಸುಮಾರು ಇಪ್ಪತ್ತು ಸಾವಿರ ವಚನಗಳು ಸಿಕ್ಕಿವೆ.

ಅಲ್ಲಮ, ಬಸವಣ್ಣ, ಅಕ್ಕ ಮಹಾದೇವಿ ಇವರೆಲ್ಲ ನಮ್ಮ ನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ. ಇವರಲ್ಲದೆ ಇತರ ನೂರಾರು ಜನ ಶರಣರೂ ವಚನಗಳನ್ನು ರಚಿಸಿದ್ದಾರೆ. ಈ ವಚನಗಳು ಧರ್ಮದ ಬಗ್ಗೆ ತಿಳಿವನ್ನು ನೀಡುತ್ತವೆ. ಬದುಕಿನ ರೀತಿಯನ್ನು ಕಲಿಸುತ್ತವೆ. ಬಡತನ ಸಿರಿತನಗಳ ಬಗೆಗೆ ಯೋಚಿಸುವಂತೆ ಮಾಡುತ್ತವೆ. ನಮ್ಮ ಬದುಕಿನಲ್ಲಿ ಕಷ್ಟಗಳು ಎದುರಾದಾಗ ಸಮಾಧಾನ ಪಡೆಯುವುದು ಹೇಗೆ ಎಂದು ತಿಳಿಸುತ್ತವೆ.

ವಚನಗಳು ಕನ್ನಡ ಭಾಷೆಯ ಒಂದು ವಿಶೇಷ. ಜಗತ್ತಿನ ಇತರ ಯಾವ ಭಾಷೆಗಳಲ್ಲೂ ಇಂಥ ರಚನೆಗಳು ಇಲ್ಲ. ವಚನದಲ್ಲಿ ಚಿಕ್ಕ ಚಿಕ್ಕ ವಾಕ್ಯಗಳು ಇರುತ್ತವೆ. ನಮಗೆಲ್ಲ ಪರಿಚಯವಿರುವ ಬದುಕಿನ ಚಿತ್ರಗಳು ಇರುತ್ತವೆ. ಸುಂದರವಾದ ಹೋಲಿಕೆಗಳು ಇರುತ್ತವೆ. ಗಹನವಾದ ಸಂಗತಿಗಳನ್ನು ಸರಳವಾಗಿ ತಿಳಿಸುತ್ತವೆ. ವಚನಗಳನ್ನು ಹಾಡಲೂಬಹುದು. ವಚನಗಳನ್ನು ಕಲಿಯುವದರಿಂದ ನಮ್ಮ ಮಾತಿನ ರೀತಿಯೂ ಸುಧಾರಿಸುತ್ತದೆ.

ವಚನಕಾರರು

ನೇಕಾರರು, ಸೌದೆ ಮಾರುವವರು, ಕುಂಬಾರರು, ಅಂಬಿಗರು, ಮಾದರು, ದನಗಳನ್ನು ಕಾಯುವವರು ಹೀಗೆ ಎಲ್ಲ ಕಸುಬುಗಳ ಜನರೂ ಶಿವ ಶರಣರಾದರು, ಅವರು ತಮ್ಮ ಅನುಭವದ ಸಾರವನ್ನು ವಚನಗಳಲ್ಲಿ ಹೇಳಿದ್ದಾರೆ.

ಈ ಶರಣರಿಗೆ ತಮ್ಮ ತಮ್ಮ ಕೆಲಸದ ಬಗೆಗೆ ಅಭಿಮಾನವಿದೆ. ಇತರ ಜನರನ್ನು ಕುರಿತು ಗೌರವವಿದೆ. ತಮ್ಮ ತಿಳಿವಳಿಕೆಯು ಎಲ್ಲ ಜನರ ಬಾಳ ಬೆಳಕು ಆಗಬೇಕೆಂಬ ಆಸೆ ಇದೆ.

ಶರಣರನ್ನು ಕುರಿತು ಹರಿಹರ ಎಂಬ ಕವಿ ಅನೇಕ ಕವನಗಳನ್ನು ರಚಿಸಿದ್ದಾನೆ. ನಮ್ಮ ಜನ ಶಿವಶರಣರನ್ನು ಗೌರವದಿಂದ ನೆನೆಯುತ್ತಾರೆ. ಪೂಜಿಸುತ್ತಾರೆ. ಕಲಿತವರು ವಚನಗಳನ್ನು ವಿಶೇಷವಾಗಿ ಅಭ್ಯಾಸಮಾಡುತ್ತಾರೆ. ಇಂಥ ಅಭ್ಯಾಸದಿಂದ ಅನೇಕ ವರುಷಗಳ ಹಿಂದೆ ನಮ್ಮ ಬದುಕು ಹೇಗೆ ಇತ್ತು ಎಂದು ತಿಳಿಯುತ್ತದೆ. ಅವರ ತಿಳಿವಳಿಕೆಯನ್ನು ನಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳಬೇಕು ಎಂಬ ಹಂಬಲ ಮೂಡುತ್ತದೆ.

ಅಲ್ಲಮ ಪ್ರಭು

ಅಲ್ಲಮಪ್ರಭು ಒಬ್ಬ ಮಹಾ ಯೋಗಿ. ಅವನು ಶಿವಮೊಗ್ಗೆಯ ಸಮೀಪ ಇರುವ ಬಳ್ಳಿಗಾವೆ ಎಂಬ ಊರಿನವನು. ಅಲ್ಲಮನು ಕೈಲಾಸದಲ್ಲಿದ್ದ ಒಬ್ಬ ಪ್ರಮಥ, ಶಿವನ ಆಣತಿಯಂತೆ ಭೂಲೋಕಕ್ಕೆ ಬಂದ ಎಂದೂ ಕೆಲವರು ನಂಬುತ್ತಾರೆ.

ಅಲ್ಲಮನು ಬಹಳ ಚೆನ್ನಾಗಿ ಮದ್ದಳೆ ಬಾರಿಸುತ್ತಿದ್ದ. ಕಾಮಲತೆ ಎಂಬಾಕೆ ಅವನನ್ನು ಮೋಹಿಸಿ ಮದುವೆಯಾಗಲು ಬಯಸಿದಳು. ಅವರು ಮದುವೆಯಾಗಿ ಸುಖವಾಗಿದ್ದರು. ಕಾಮಲತೆಗೆ ಒಮ್ಮೆ ಜ್ವರ ಬಂದು ತೀರಿಹೋದಳು. ಅಲ್ಲಮನಿಗೆ ಬದುಕಿನ ಬಗ್ಗೆ ವೈರಾಗ್ಯ ಹುಟ್ಟಿತು. ಅಲ್ಲಮನು ಮದುವೆಯಾಗಲಿಲ್ಲ ಎಂದೂ ಇನ್ನೊಂದು ಕಥೆ ಇದೆ. ಅವನಿಗೆ ಅನಿಮಿಷ ಎಂಬ ಶಿವಯೋಗಿಯ ದರ್ಶನವಾಯಿತು. ಅಲ್ಲಮನು ಅವನಿಂದ ಒಂದು ಲಿಂಗವನ್ನು ಪಡೆದುಕೊಂಡ. ತನ್ನ ಗುರುವಿನಿಂದ ಜ್ಞಾನ ಸಂಪಾದಿಸಿದ. ಆನಂತರ ನಾಡಿನಲ್ಲಿ

ಸಂಚರಿಸುತ್ತ ಜನರಿಗೆ ತಿಳಿವಳಿಕೆ ನೀಡಿದ. ಸಿದ್ಧರಾಮ ಮುಂತಾದವರೆಲ್ಲ ಅವನನ್ನು ಗುರು ಎಂದು ತಿಳಿದರು. ಗುಹೇಶ್ವರ ಅಲ್ಲಮನ ಮೆಚ್ಚಿನ ದೇವರು.

ಕಲ್ಯಾಣದಲ್ಲಿ ಬಸವಣ್ಣನವರು ಅನುಭವ ಮಂಟಪವನ್ನು ಕಟ್ಟಿದರು. ಅಲ್ಲಿ ಶಿವಶರಣರು ಸೇರಿ ತಮ್ಮ ವಿಚಾರಗಳನ್ನೂ ಅನುಭವಗಳನ್ನೂ ಹಂಚಿಕೊಳ್ಳುತ್ತಿದ್ದರು. ಅಲ್ಲಮನು ಅಲ್ಲಿಗೆ ಹೋಗಿ ಅನುಭವ ಮಂಟಪದ ಪ್ರಮುಖನಾದ. ಅಲ್ಲಿರುತ್ತಾ ಅಲ್ಲಮನು ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ ಇಂಥವರಿಗೆಲ್ಲ ತಿಳಿವಳಿಕೆಯ ದಾರಿತೋರಿಸಿದ.

ಬಸವಣ್ಣ

ಬಸವಣ್ಣನು ಬಾಗೇವಾಡಿ ಊರಿನಲ್ಲಿ ಹುಟ್ಟಿದ. ಅವನ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಬಸವಣ್ಣನು ಹುಟ್ಟಿನಿಂದ ಬ್ರಾಹ್ಮಣ ಜಾತಿಗೆ ಸೇರಿದವನು. ಆದರೆ ಅವನಿಗೆ ಒಂದು ಜಾತಿ ಹೆಚ್ಚು, ಇನ್ನೊಂದು ಜಾತಿ ಕಡಿಮೆ ಎಂಬ ಮಾತು ಒಪ್ಪಿಗೆಯಾಗಲಿಲ್ಲ. ಜಾತವೇದ ಮುನಿಗಳಿಂದ ಆತ ದೀಕ್ಷೆಯನ್ನು ಪಡೆದುಕೊಂಡ. ಕೂಡಲ ಸಂಗಮನು ಬಸವಣ್ಣನ ಮೆಚ್ಚಿನ ದೇವರು.

ಬಸವಣ್ಣನು ಬಿಜ್ಜಳನ ಅರಮನೆಯಲ್ಲಿ ಅಧಿಕಾರಿಯಾದ. ಬಿಜ್ಜಳನು ಒಬ್ಬ ಅರಸು. ಅವನು ಕಲಚೂರಿ ಎಂಬ ವಂಶಕ್ಕೆ ಸೇರಿದವನು. ಕಲ್ಯಾಣ ಪಟ್ಟಣದಲ್ಲಿ ಅವನು ರಾಜನಾಗಿದ್ದ. ಬಸವಣ್ಣನು ಬಿಜ್ಜಳನ ಕೋಶಾಧಿಕಾರಿಯಾಗಿದ್ದ.

ಬಸವಣ್ಣನಿಗೆ ಇಬ್ಬರು ಹೆಂಡಿರು. ನೀಲಾಂಬಿಕೆ ಮತ್ತು ಗಂಗಾಂಬಿಕೆ ಎಂದು ಅವರ ಹೆಸರು. ಬಸವಣ್ಣನು ಜನರಲ್ಲಿದ್ದ ಮೇಲು ಕೀಳು ಎಂಬ ಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ. ಶಿವನನ್ನು ಒಪ್ಪಿ ಪೂಜಿಸುವವರೆಲ್ಲ ಒಂದೇ ಜಾತಿ ಎಂದು ಹೇಳಿದ. ಸಮಾಜದ ಎಲ್ಲ ಜಾತಿಯ ಜನರಿಗೂ ಶಿವದೀಕ್ಷೆಯನ್ನು ನೀಡಿದ. ಅವರೆಲ್ಲರನ್ನೂ ಶರಣರೆಂದೇ ಗೌರವದಿಂದ ಕಂಡ. ಇದರಿಂದ ಜನರಲ್ಲಿ ಅಭಿಮಾನ ಹುಟ್ಟಿತು. ಬಸವಣ್ಣ ಕಾಯಕಕ್ಕೆ ಇರುವ ಬೆಲೆಯನ್ನು ತಿಳಿಸಿಕೊಟ್ಟ. ಸಮಾಜದಲ್ಲಿ ಎಲ್ಲ ಕಸುಬಿನ ಬಗ್ಗೆ ಗೌರವ ಹುಟ್ಟುವಂತೆ ಮಾಡಿದ.

ಬಸವಣ್ಣನ ಕೆಲಸಗಳಿಂದ ಕೆಲವು ಜನರ ಕಣ್ಣು ಕೆಂಪಾಯಿತು. ಅವನ ಮೇಲೆ ಆಪಾದನೆಗಳನ್ನು ಹೊರಿಸಿದರು. ಬಸವಣ್ಣನು ಬ್ರಾಹ್ಮಣ ಹುಡುಗಿ ಮತ್ತು ಹರಿಜನರ ಹುಡುಗನ ಮದುವೆಗೆ ಒತ್ತಾಸೆ ನೀಡಿದ. ಇದರಿಂದ ಜಾತಿಗಳೇ ಮುಖ್ಯ ಎಂದು ತಿಳಿಯುವ ಜನರಿಗೆ ಕೋಪ ಬಂದಿತು. ಶ್ರೀಮಂತರು, ಮೇಲುಜಾತಿಯ ಜನಗಳು ತಿರುಗಿಬಿದ್ದರು. ರಾಜ್ಯದಲ್ಲಿ ಗಲಭೆ ಎದ್ದಿತು. ಬಸವಣ್ಣನು ಕೂಡಲ ಸಂಗಮಕ್ಕೆ ಹೊರಟು ಹೋದ. ಅಲ್ಲಿಯೇ ಅವನ ಜೀವನ ಮುಕ್ತಾಯವಾಯಿತು.

ನಮ್ಮ ಸಮಾಜದ ಬದುಕು ಹಸನಾಗಬೇಕು ಎಂದು ಬಯಸುವವರಿಗೆ ಬಸವಣ್ಣ ಸರಿಯಾದ ದಾರಿಯನ್ನು ತೋರಿಸಿಕೊಟ್ಟಿದ್ದಾನೆ.

ಅಕ್ಕ ಮಹಾದೇವಿ

ಶಿವಶರಣರಲ್ಲಿ ಮಹಿಳೆಯರೂ ಇದ್ದಾರೆ. ಅಕ್ಕಮಹಾದೇವಿ ಪ್ರಸಿದ್ಧ ಶರಣೆ. ಅವಳು ಶಿವಮೊಗ್ಗೆಯ ಬಳಿಯ ಉಡುತಡಿ ಊರಿನವಳು. ಮಹಾದೇವಿಯನ್ನು ಆ ಊರಿನ ರಾಜ ಕೌಶಿಕನು ಮೋಹಿಸಿ ಮದುವೆಯಾದ. ಆದರೆ ಮಹಾದೇವಿಗೆ ದೇವರ ಮೇಲೆ ತುಂಬ ಭಕ್ತಿ ಇತ್ತು. ಕೌಶಿಕನು ಅವಳ ಭಕ್ತಿಗೆ ಅಡ್ಡ ಬಂದನು. ಮಹಾದೇವಿ ಗಂಡನನ್ನು ತೊರೆದು ಹೊರಟಳು. ಅವಳಿಗೆ ಮದುವೆಯಾಗಲಿಲ್ಲ. ಮೊದಲಿನಿಂದಲೂ ದೇವರನ್ನು ಕಾಣುವುದೇ ಅವಳ ಆಸೆ ಎಂದೂ ಕೆಲವರು ಹೇಳುತ್ತಾರೆ. ಚೆನ್ನಮಲ್ಲಿಕಾರ್ಜುನನು ಅವಳ ಮೆಚ್ಚಿನ ದೇವರು.

ಜೇಡರ ದಾಸಿಮಯ್ಯ

ಇವನು ಬಸವಣ್ಣ ಮುಂತಾದ ಶರಣರಿಗಿಂತ ಹಿಂದಿನ ಕಾಲದವನು. ದಾಸಿಮಯ್ಯನು ನೇಯ್ಗೆಯ ಕೆಲಸವನ್ನು ಮಾಡುತ್ತಿದ್ದ. ಸಮಾಜದ ಅಂಕು ಡೊಂಕುಗಳನ್ನು ಇವನು ವಚನಗಳಲ್ಲಿ ಟೀಕಿಸಿದ್ದಾನೆ. ನಿಜವಾದ ಭಕ್ತಿ ಹೇಗಿರಬೇಕು ಎಂದು ತಿಳಿಸಿದ್ದಾನೆ. ಲೋಕದ ಬದುಕಿನ ಸುಂದರ ಚಿತ್ರಗಳನ್ನು ನೀಡಿದ್ದಾನೆ.

ಕೆಲವು ವಚನಗಳು

೧. ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ *ದೀಪ್ತಿಯಂತಿರಬೇಕು

ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ ?

* ದೀಪ್ತಿ = ಬೆಳಕು ;ಮಚ್ಚಿ= ಮೆಚ್ಚಿ

ಇದು ಬಸವಣ್ಣನ ಒಂದು ವಚನ. ಇದರಲ್ಲಿ ನಮ್ಮ ಮಾತು ಹೇಗಿರಬೇಕು ಎಂದು ಹೇಳಲಾಗಿದೆ. ನಮ್ಮ ಮಾತು ಮುತ್ತಿನ ಮಾಲೆಯಂತೆ ಇರಬೇಕು. ಅಚ್ಚುಕಟ್ಟಾಗಿ ಎಷ್ಟು ಬೇಕೋ ಅಷ್ಟು ಮಾತು ಆಡಬೇಕು. ಮಾತು ಮಾಣಿಕ್ಯದಂತೆ ಬೆಳಕು ನೀಡಬೇಕು. ಸ್ಫಟಿಕವು ಗಟ್ಟಿಯಾಗಿರುತ್ತದೆ. ಆದರೆ ಅದರಾಚೆಗೆ ಇರುವುದೂ ಕಾಣುತ್ತದೆ. ಮಾತು ನಮ್ಮ ಮನಸ್ಸನ್ನು ಮರೆ ಮಾಡಬಾರದು. ನಡೆ ನುಡಿ ಎರಡೂ ಒಂದೇ ಆಗಿರಬೇಕು. ಆಗ ದೇವರು ಒಲಿಯುತ್ತಾನೆ.

೨. ವಚನದಲ್ಲಿ ನಾಮಾಮೃತ ತುಂಬಿ
ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹುತುಂಬಿ
ಕಿವಿಯಲ್ಲಿ ಕೀರುತಿ ತುಂಬಿ
ಕೂಡಲಸಂಗಮದೇವಾ
ನಿಮ್ಮ ಚರಣಕಮಲದಲಾನು ತುಂಬಿ

ನನ್ನ ಮಾತಿನಲ್ಲಿ ದೇವರ ಹೆಸರು ತುಂಬಿದೆ. ನನ್ನ ಕಣ್ಣುಗಳಲ್ಲಿ ದೇವರ ರೂಪ ತುಂಬಿದೆ. ನನ್ನ ಮನಸ್ಸಿನಲ್ಲಿದೇವರ ನೆನಪು ತುಂಬಿದೆ. ನನ್ನ ಕಿವಿಯಲ್ಲಿ ದೇವರ ಕೀರ್ತಿ ತುಂಬಿದೆ. ನಾನು ದೇವರ ಪಾದ ಕಮಲಗಳಲ್ಲಿರುವ ತುಂಬಿ ಎಂದು ಬಸವಣ್ಣ ಹೇಳುತ್ತಾನೆ.

೩. ಏನು ಬಂದಿರಿ ಹದುಳವಿದ್ದಿರೆ ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೇ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೇ?
ಒಡನೆ ನುಡಿದರೆ ಸಿರ-ಹೊಟ್ಟೆಯೊಡೆವುದೇ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವನು?

ಹದುಳವಿದ್ದಿರೇ= ಕ್ಷೇಮವೇ? ಹೋಹುದೇ= ಹೋಗುವುದೇ?
ಗುಣವಿಲ್ಲದಿರ್ದಡೆ=ಗುಣವಿಲ್ಲದಿದ್ದರೆ ಕೆಡಹಿ=ಕೆಡವಿ, ಮಾಣ್ಬನೆ=ಬಿಡುವನೆ

ನಾವು ಹೇಗೆ ನಡೆದುಕೊಳ್ಳಬೇಕು ಎಂದು ಬಸವಣ್ಣ ಇಲ್ಲಿ ಹೇಳಿದ್ದಾನೆ. ನಮ್ಮಲ್ಲಿಗೆ ಬಂದವರನ್ನು ಬಂದಿರೇ, ಬನ್ನಿ, ಕುಳಿತುಕೊಳ್ಳಿ ಎಂದು ಬಾಯಿತುಂಬ ಮಾತನಾಡಿಸಬೇಕು. ಮಾತು ಆಡಿದರೆ ನಮ್ಮ ಸಿರಿ ಹಾಳಾಗುವುದಿಲ್ಲ. ನಮ್ಮ ಮನೆಗೆ ಕೇಡು ಆಗುವುದಿಲ್ಲ. ನಮ್ಮ ಹೊಟ್ಟೆ ಒಡೆದು ಹೋಗುವುದಿಲ್ಲ. ನಾವು ಯಾರಿಗೂ ಸಹಾಯ ಮಾಡಲಾಗದಿದ್ದರೂ ಒಳ್ಳೆಯ ಗುಣ ನಮ್ಮಲ್ಲಿರಬೇಕು. ಇಲ್ಲದಿದ್ದರೆ ದೇವರು ಮೆಚ್ಚುವುದಿಲ್ಲ.

೪. ನೀರಕಂಡಲ್ಲಿ ಮುಳುಗುವರಯ್ಯಾ
ಮರವ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವನು ಒಣಗುವ ಮರವನು ಮೆಚ್ಚಿದವರು
ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ?

ನೀರಿನಲ್ಲಿ ಮುಳುಗಿದರೆ ದೇವರು ಮೆಚ್ಚುವುದಿಲ್ಲ. ಮರವನ್ನು ಸುತ್ತಿದರೆ ದೇವರು ಕಾಣುವುದಿಲ್ಲ. ನೀರು ಬತ್ತುತ್ತದೆ, ಮರ ಒಣಗುತ್ತದೆ. ಸ್ನಾನ, ಪ್ರದಕ್ಷಿಣೆಗಳೇ ತುಂಬ ಮುಖ್ಯ ಎಂದು ತಿಳಿದವರಿಗೆ ದೇವರು ಒಲಿಯುವುದಿಲ್ಲ.

೫. ಹುತ್ತವ ಬಡಿದರೆ ಹಾವು ಸಾಯಬಲ್ಲುದೆ ಅಯ್ಯಾ?
ಅಘೋರ ತಪವ ಮಾಡಿದೊಡೇನು ?
ಅಂತರಂಗ ಆತ್ಮ ಶುದ್ಧಿ ಇಲ್ಲದವರನೆಂತು ನಂಬುವನಯ್ಯಾ
ಕೂಡಲಸಂಗಮದೇವ?

ಹಾವು ಕೆಟ್ಟ ಜಂತು. ಅದನ್ನು ಕೊಲ್ಲಬೇಕೆಂದರೆ ಹಾವನ್ನೇ ಹೊಡೆಯಬೇಕು. ಹುತ್ತವನ್ನು ಹೊಡೆದರೆ ಹಾವು ಸಾಯುವುದಿಲ್ಲ. ಹಾಗೆಯೇ ನಮ್ಮ ಮನಸ್ಸಿನಲ್ಲಿ ಕೆಟ್ಟ ಸಂಗತಿಗಳು ಹಾವಿನಂತೆ ಸೇರಿರುತ್ತವೆ. ನಮ್ಮ ಅಂತರಂಗದ ಹಾವನ್ನು ಹೊರಗೆಳೆದು ಕೊಲ್ಲದೆ ಸುಮ್ಮನೆ ಪೂಜೆ ಮಾಡುವವರನ್ನು ದೇವರು ನಂಬುವುದಿಲ್ಲ.

೬. *ವ್ಯಾಧನೊಂದು ಮೊಲನ ತಂದರೆ
*ಸಲುವ ಹಾಗಕ್ಕೆ *ಬಿಲಿವರಯ್ಯಾ

*ನೆಲನಾಳ್ದನ ಹೆಣನೆಂದರೆ
ಒಂದಡಕೆಗೆ ಕೊಂಬರಿಲ್ಲ ನೋಡಯ್ಯಾ.
ಮೊಲನಿಂದ ಕಡುಕಷ್ಟ ನರನ ಬಾಳುವೆ
ನೆರೆ ನಂಬೋ ಕೂಡಲಸಂಗಮದೇವನ.

* ವ್ಯಾಧ=ಬೇಡ, ಸಲುವ ಹಾಗ=ಬೆಲೆ ಇರುವ ದುಡ್ಡು,
ಬಿಲಿವರಯ್ಯಾ=ಬೆಲೆ ಕೊಡುವರಯ್ಯಾ,
ನೆಲನಾಳ್ದನ=ನೆಲವನ್ನು ಆಳಿದವನ

ಬೇಟೆಗಾರನು ಒಂದು ಮೊಲವನ್ನು ಕೊಂದು ತಂದರೆ ಅದಕ್ಕೆ ದುಡ್ಡು ಕೊಟ್ಟು ಕೊಳ್ಳುತ್ತೇವೆ. ಆದರೆ ದೇಶವನ್ನಾಳಿದ ರಾಜನ ಹೆಣವನ್ನು ಅಡಕೆಗೂ ಯಾರೂ ಕೊಳ್ಳುವುದಿಲ್ಲ. ಮನುಷ್ಯ ತಾನೇ ಶ್ರೇಷ್ಠ ಎಂದು ಮೆರೆಯಬಾರದು.

೭. ಹಾವು ತಿಂದವರ ನುಡಿಸಬಹುದು
*ಗರ ಹೊಡೆದವರ ನುಡಿಸಬಹುದು
*ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರಯ್ಯಾ ಕೂಡಲಸಂಗಮದೇವ.

* ಗರ=ಗ್ರಹ, ದೆವ್ವ;ಸಿರಿಗರ=ಶ್ರೀಮಂತಿಕೆಯ ದೆವ್ವ

ಹಾವು ಕಚ್ಚಿದವರನ್ನು ಮಾತನಾಡಿಸಬಹುದು. ದೆವ್ವ ಹಿಡಿದವರನ್ನೂ ಮಾತನಾಡಿಸಬಹುದು. ಆದರೆ ಶ್ರೀಮಂತಿಕೆಯ ಭೂತ ಹಿಡಿದವರು ಮಾತನ್ನೇ

ಆಡಲಾರರು. ಹಣದ ಜಂಬದಿಂದ ಬೀಗುತ್ತಿರುತ್ತಾರೆ. ಅವರು ಮಾತನಾಡಬೇಕಾದರೆ ಬಡತನವೆಂಬ ಮಂತ್ರವಾದಿ ಬರಬೇಕು. ಬಡತನ ನಿಜವಾಗಿ ಕೂಡಿ ಬಾಳುವಂತೆ ಮಾಡುತ್ತದೆ. ಅಹಂಕಾರವನ್ನು ಮುರಿಯುತ್ತದೆ.

೮. ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಭ ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯಾ
ಕೂಡಲಸಂಗಮದೇವ ಕೇಳಯ್ಯಾ
*ಸ್ಥಾವರಕ್ಕಳಿವುಂಟು *ಜಂಗಮಕ್ಕಳಿವಿಲ್ಲ.

* ಸ್ಥಾವರ=ಜೀವವಿಲ್ಲದ್ದು, ಜಂಗಮ=ಜೀವಂತವಾದದ್ದು

ಹಣವಿರುವವರು ದೇವಾಲಯಗಳನ್ನು ಕಟ್ಟಿಸುತ್ತಾರೆ. ಆದರೆ ನಮ್ಮ ದೇಹವೇ ನಿಜವಾದ ದೇವಾಲಯ. ಕಟ್ಟಿಸಿದ ದೇವಾಲಯ ಬಿದ್ದು ಹೋಗುತ್ತದೆ. ದೇಹದ ದೇವಾಲಯ ಮನುಷ್ಯ ಇರುವವರೆಗೂ ಇರುತ್ತದೆ. ಜೀವವಿಲ್ಲದ್ದು ಅಳಿಯುತ್ತದೆ, ಜೀವಂತವಾದದ್ದು ಉಳಿಯುತ್ತದೆ.

೯. ಅತ್ತಲಿತ್ತಲು ಹೋಗದಂತೆ *ಹೆಳವನಮಾಡಯ್ಯಾ ತಂದೆ
ಸುತ್ತಿಸುಳಿದು ನೋಡದಂತೆ *ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ

ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವಾ.

ಹೆಳವ=ಕುಂಟ, ಅಂಧಕ= ಕುರುಡ

ನಮ್ಮ ಕೈ, ಕಾಲು, ಕಣ್ಣು, ಕಿವಿಗಳು ನಮ್ಮ ಮಾತನ್ನು ಕೇಳುವುದೇ ಇಲ್ಲ. ಬದಲಾಗಿ ನಾವೇ ಅವುಗಳ ಮಾತನ್ನು ಕೇಳುತ್ತೇವೆ. ಆದರೆ ನಮ್ಮ ಬದುಕಿನಲ್ಲಿ ಏನಾದರೂ ಸಾಧಿಸಬೇಕಾದರೆ ನಮಗೆ ಗಟ್ಟಿಯಾದ ಮನಸ್ಸು ಬೇಕು. ನಮ್ಮ ಆದರ್ಶದ ವಿಷಯವೊಂದನ್ನು ಬಿಟ್ಟು ನಮ್ಮ ಮನಸ್ಸು ಚಲಿಸಬಾರದು. ಹಾಗೆ ನನ್ನ ಮನಸಿಗೆ ಶಕ್ತಿಕೊಡು ಎಂದು ಬಸವಣ್ಣನವರು ಬೇಡುತ್ತಾರೆ.

೧೦. ಕಾಲಲಿ ಕಟ್ಟಿದ ಗುಂಡು ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು ಮುಳುಗಲೀಯದು ಬೆಂಡು
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ ಕೂಡಲಸಂಗಯ್ಯಾ

ಶರಧಿ= ಸಾಗರ, ದಾಂಟಿಸಿ = ದಾಟಿಸಿ

ಈ ಬದುಕೇ ವಿಚಿತ್ರ. ಕಾಲಲ್ಲಿ ಗುಂಡು, ಕೊರಳಲ್ಲಿ ಬೆಂಡು ಕಟ್ಟಿಕೊಂಡು ಈಜು ಬಿದ್ದಂತೆ ನಮ್ಮ ಬದುಕು. ಈಜಲೂ ಆಗದು, ಮುಳುಗಲೂ ಆಗದು. ಇಟ್ಟುಕೊಂಡ ಗುರಿಯನ್ನು ಸಾಧಿಸಲು ಈಜಬೇಕು. ಆದರೆ ಸಣ್ಣ ಪುಟ್ಟ

ತೊಂದರೆಗಳೇ ನಮ್ಮನ್ನು ಮುಳುಗಿಸುವ ಗುಂಡಿನಂತೆ ಆಗಿಬಿಡುತ್ತವೆ. ನಾವೆಲ್ಲರೂ ಎದುರಿಸುವ ಕಷ್ಟವನ್ನು ಈ ವಚನ ಹೇಳುತ್ತಿದೆ.

೧೧. ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ.

ಕೆಲವರು ಚಿನ್ನವನ್ನು ಮಾಯೆ ಅನ್ನುತ್ತಾರೆ. ಇನ್ನು ಕೆಲವರು ಹೆಣ್ಣನ್ನು ಮಾಯೆ ಅನ್ನುತ್ತಾರೆ. ಮತ್ತೆ ಕೆಲವರು ನೆಲದ ಆಸೆಯೇ ಮಾಯೆ ಅನ್ನುತ್ತಾರೆ. ಆದರೆ ಇವು ಯಾವುವೂ ಮಾಯೆ ಅಲ್ಲ. ಮಾಯೆ ಇರುವುದು ನಮ್ಮ ಮನಸ್ಸಿನಲ್ಲಿ. ಮನಸ್ಸೇ ಮಾಯೆ. ಹೊನ್ನು, ಹೆಣ್ಣು, ಮಣ್ಣು, ನೆಲ ಇವೆಲ್ಲ ಇರುತ್ತವೆ. ಆದರೆ ಅವುಗಳನ್ನು ಬಯಸಿ ತೊಳಲಾಡುವುದು ನಮ್ಮ ಮನಸ್ಸೇ ಅಲ್ಲವೇ?

೧೨. ಕೊಟ್ಟ ಕುದರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವವರು
ವೀರರೂ ಅಲ್ಲ ! ಧೀರರೂ ಅಲ್ಲ!
ಇದು ಕಾರಣ
ನೆರೆ ಮೂರು ಲೋಕವೆಲ್ಲವೂ

ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರನೆಂಬ ಲಿಂಗವನವರೆತ್ತಬಲ್ಲರೋ?

ನಮ್ಮ ಬದುಕು ಹೀಗಿದೆ. ಇರುವ ಬದುಕನ್ನು ಇರುವ ರೀತಿಯಲ್ಲಿ ಎದುರಿಸಿ ಬದುಕಬೇಕು. ನಮ್ಮ ಪಾಲಿಗೆ ಬಂದ ಕುದುರೆಯನ್ನು ಏರಲು ನಮಗೆ ಆಗದಿದ್ದರೆ ನಾವು ವೀರರು ಹೇಗೆ ಆಗುತ್ತೇವೆ?ನಾವು ಧೀರರು ಆಗಬೇಕೇ ಹೊರತು ಇಲ್ಲದ ಮತ್ತೇನೋ ಇರಬೇಕಾಗಿತ್ತೆಂದು ಬಯಸುವ ಹೇಡಿಗಳು ಆಗಬಾರದು. ಆದರೆ ಈ ಲೋಕದ ಜನ ಕೊಟ್ಟ ಕುದುರೆಯನ್ನು ಏರದೆ ಇನ್ನೊಂದು ಕುದುರೆ ಸಿಕ್ಕೀತೆಂದು ಹಲ್ಲಣ ಹೊತ್ತು ಅಲೆಯುತ್ತಾರೆ ಎಂದು ಅಲ್ಲಮಪ್ರಭು ಹೇಳುತ್ತಾನೆ.

೧೩. ದೇಹದೊಳಗೆ ದೇವಾಲಯವಿದ್ದು,
ಮತ್ತೆ ಬೇರೆ ದೇವಾಲಯವೇಕೆ?
ಎರಡಕ್ಕೂ ಹೇಳಲಿಲ್ಲಯ್ಯ!
ಗುಹೇಶ್ವರ, ನೀನು ಕಲ್ಲಾದರೆ *ನಾನೇನಪ್ಪೆನು?

ನಾನೇನಪ್ಪೆನು =ನಾನೇನಾಗುವೆನು

ನಮ್ಮ ದೇಹವೇ ದೇವಾಲಯವಾಗಿರುವಾಗ ಬೇರೆ ಇನ್ನೊಂದು ದೇವಾಲಯ ಬೇಕೆಂದು ಬಯಸುವುದು ತಪ್ಪು. ದೇವಾಲಯದಲ್ಲಿರುವ ಕಲ್ಲನ್ನು ದೇವರೆಂದು ತಿಳಿಯುವುದು ಸರಿಯೇ? ದೇವರು ಕಲ್ಲಾಗುವುದಾದರೆ ಮನುಷ್ಯರಾದ ನಾವು ಏನಾಗಬೇಕು? ಎಂದು ಅಲ್ಲಮ ಕೇಳುತ್ತಾನೆ.

೧೪. ನಾ ದೇವನಲ್ಲದೆ ನೀ ದೇವನೇ?
ನೀ ದೇವನಾದರೆ ಎನ್ನನ್ನೇಕೆ ಸಲಹೆ?
*ಆರೈದು ಒಂದು ಕುಡಿತೆ ನೀರನೆರೆವೆ, ಹಸಿದಾಗ ತುತ್ತು ಓಗರವನಿಕ್ಕುವೆ
ನಾ ದೇವ ಕಾಣಾ, ಗುಹೇಶ್ವರ.

* ಆರೈದು =ಪ್ರೀತಿಯಿಂದ

ಮನುಷ್ಯನು ದೇವರ ಕಲ್ಪನೆಯನ್ನು ಮಾಡಿಕೊಂಡ. ಅಂದ ಮೇಲೆ ಮನುಷ್ಯ ದೊಡ್ಡವನು ತಾನೇ? ದೇವರಿಗೆ ನೀರೆರೆಯುವುದು ಮನುಷ್ಯ. ದೇವರಿಗೆ ಅನ್ನವಿಡುವುದು ಮನುಷ್ಯ. ಮನುಷ್ಯನೇ ದೇವರು ಎಂದು ಅಲ್ಲಮಪ್ರಭು ಹೇಳಿದ್ದಾನೆ. ಮನುಷ್ಯನಿಗೆ ಬುದ್ಧಿ ಶಕ್ತಿ ಇದೆ. ಜೊತೆಗೇ ಕಲ್ಪನೆಯ ಶಕ್ತಿಯೂ ಇದೆ. ಬದುಕು ಹಸನಾಗಲಿ ಎಂದು ಮನುಷ್ಯ ದೇವರನ್ನು ಕಲ್ಪಿಸಿಕೊಂಡ. ಅಂದಮೇಲೆ ದೇವರಿಗಿಂತ ಮನುಷ್ಯ ದೊಡ್ಡವನು ತಾನೇ? ಏಕೆಂದರೆ ಶಕ್ತಿ ಇರುವವರು ಇಲ್ಲದವರನ್ನು ಕಾಪಾಡಬೇಕು. ದೊಡ್ಡವರು ಚಿಕ್ಕವರನ್ನು ನೋಡಿಕೊಳ್ಳಬೇಕು. ದೇವರಿಗೆ ಹಸಿವಾಗುತ್ತದೆ. ಆಗ ಮನುಷ್ಯ ದೇವರಿಗೆ ತುತ್ತು ಅನ್ನ ನೀಡುತ್ತಾನೆ. ದೇವರಿಗೆ ಬಾಯಾರುತ್ತದೆ. ಆಗ ಮನುಷ್ಯ ದೇವರಿಗೆ ಗುಟುತು ನೀರು ಕುಡಿಸುತ್ತಾನೆ. ದೇವರನ್ನು ಮನುಷ್ಯನೇ ಕಾಪಾಡುತ್ತಿದ್ದಾನೆ. ದೇವರು ಮನುಷ್ಯನನ್ನು ಸಾಕುತ್ತಿರುವುದು ಎಲ್ಲಿ? ಮನುಷ್ಯನಿಗಿಂತ ಬೇರೆ ದೇವರು ಯಾರು? ಮನುಷ್ಯ ಕಟ್ಟಿಕೊಂಡ ದೇವರಿಗೆ ಮನುಷ್ಯರಿಗಿರುವಹಾಗೇ ಹಸಿವು ಬಾಯಾರಿಕೆ ಇದೆಯಲ್ಲ ಎಂದು ಅಲ್ಲಮ ಕೇಳುತ್ತಿದ್ದಾನೆ.

೧೫. ಎತ್ತಣ ಮಾಮರ?ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ?

ಮಾವಿನ ಮರ ಎಲ್ಲಿಯೋ ಇರುತ್ತದೆ. ಅದರ ಮೇಲೆ ಎಲ್ಲಿಂದಲೋ ಬಂದ ಕೋಗಿಲೆ ಕುಳಿತುಕೊಳ್ಳುತ್ತದೆ. ಎಲ್ಲಿಂದ ಎಲ್ಲಿಗೆ ಅವೆರಡರ ಸಂಬಂಧ? ನೆಲ್ಲಿಯಕಾಯಿ ಬೆಟ್ಟದ ಮೇಲೆ ಮರದಲ್ಲಿರುತ್ತದೆ. ದೂರದ ಸಮುದ್ರದಲ್ಲಿ ಉಪ್ಪು ಇರುತ್ತದೆ. ಅವೆರಡಕ್ಕೂ ಏನು ಸಂಬಂಧ? ದೇವರಿಗೂ ನಮಗೂ ಎಂಥ ವಿಚಿತ್ರ ಸಂಬಂಧ ಎಂದು ಅಲ್ಲಮ ಕೇಳುತ್ತಿದ್ದಾನೆ.

೧೬. *ಮರ್ತ್ಯ ಲೋಕವೆಂಬುದು *ಕರ್ತಾರನ *ಕಮ್ಮಟವಯ್ಯಾ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವಾ

* ಮರ್ತ್ಯಲೋಕ = ಈ ಲೋಕ, ಕರ್ತಾರ= ಸೃಷ್ಟಿಸುವವನು,
ಕಮ್ಮಟ=ನಾಣ್ಯಗಳನ್ನು ತಯಾರಿಸುವ ಟಂಕಸಾಲೆ.

ಈ ಲೋಕವೆಂಬುದು ಒಂದು ಟಂಕಸಾಲೆ. ನಾವು ಮನುಷ್ಯರು ಟಂಕಸಾಲೆಯಲ್ಲಿ ತಯಾರಾಗುವ ನಾಣ್ಯಗಳು. ನಾಣ್ಯವು ಈ ಲೋಕದಲ್ಲಿ ನಡೆದರೆ

ಸಾಕು. ಇಲ್ಲಿ ನಡೆಯುವ ನಾಣ್ಯ ಪರಲೋಕದಲ್ಲೂ ನಡೆಯುತ್ತದೆ. ಇರುವಷ್ಟು ಕಾಲ ಈ ಲೋಕದಲ್ಲಿ ಯೋಗ್ಯರಾಗಿ ಇರಬೇಕೆಂದು ಬಸವಣ್ಣನವರು ಹೇಳುತ್ತಾರೆ.

೧೭. ನೆಲನೊಂದೆ ಹೊಲಗೇರಿ-ಶಿವಾಲಯಕ್ಕೆ;
ಜಲವೊಂದೆ *ಶೌಚ *ಮಜ್ಜನಕ್ಕೆ;
ಕುಲವೊಂದೆ ತನ್ನ ತಾನರಿದವಂಗೆ;
ಫಲವೊಂದೆ *ಷಡುದರುಶನ ಮುಕ್ತಿಗೆ;
ನಿಲವೊಂದೆ, ಕೂಡಲಸಂಗಮದೇವ, ನಿಮ್ಮನರಿದವಂಗೆ

* ಶೌಚ=ಶುಚಿ ಮಾಡಿಕೊಳ್ಳುವುದು, ಮಜ್ಜನ=ಸ್ನಾನ, ಷಡುದರುಶನ=ವೇದಾಂತ, ನ್ಯಾಯ ಮುಂತಾದ ಆರು ಬಗೆಯ ತಿಳಿವಳಿಕೆಗಳು.

ಯಾವ ನೆಲದ ಮೇಲೆ ಹೊಲೆಗೇರಿ ಇರುತ್ತದೋ, ಅದೇ ನೆಲದ ಮೇಲೆ ದೇವಾಲಯವೂ ಇರುತ್ತದೆ. ನೆಲ ಇರುವುದು ಒಂದೇ. ನಮ್ಮನ್ನು ನಾವು ಶುಚಿ ಮಾಡಿಕೊಳ್ಳಲು ಮತ್ತು ಸ್ನಾನ ಮಾಡಲು ಬಳಸುವ ನೀರುಕೂಡ ಒಂದೇ. ನಿಜವಾಗಿ ತಿಳಿವಳಿಕೆ ಇರುವವರಿಗೆ ಮನುಷ್ಯ ಕುಲ ಒಂದೇ. ಎಷ್ಟು ಜ್ಞಾನ ಸಂಪಾದಿಸಿದರೂ ಮುಕ್ತಿ ಒಂದೇ.

೧೮. ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ.

ಇವನು ಯಾರ ಪೈಕಿ? ಅವನು ಯಾರ ಪೈಕಿ? ಇಂಥ ಪ್ರಶ್ನೆಗಳು

ನಮ್ಮ ಮನಸ್ಸಿನಲ್ಲಿ ಬರಬಾರದು. ಎಲ್ಲರೂ ನಮ್ಮವರೇ ಅನ್ನಿಸಬೇಕು. ಎಲ್ಲರೂ ದೇವರ ಮನೆಯ ಮಕ್ಕಳು ಎಂದು ನಮ್ಮ ಮನಸ್ಸಿಗೆ ತೋರಬೇಕು.

೧೯. ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ,
ಸುರುಗಿಯ ಮೊನೆಗಂಜೆ
ಒಂದಕ್ಕಂಜುವೆ, ಒಂದಕ್ಕಳುಕುವೆ;
ಪರಸ್ತ್ರೀ ಪರಧನವೆಂಬ ಜೂಜಿಗಂಜುವೆ!
ಮುನ್ನಂಜದ ರಾವಣನೇವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವಾ.

ಹರಿಯುವ ಹಾವು ಭಯವನ್ನು ಹುಟ್ಟಿಸುವುದಿಲ್ಲ. ಬೆಂಕಿಯ ನಾಲಗೆ ಅಂಜಿಸುವುದಿಲ್ಲ. ಆದರೆ ಬೇರೆಯವರ ಹೆಣ್ಣು ಬೇರೆಯವರ ಹಣ ಇವುಗಳ ಆಸೆ ಭಯವನ್ನು ಹುಟ್ಟಿಸುತ್ತವೆ. ಇಂಥ ಭಯ ರಾವಣನಿಗೆ ಇರಲಿಲ್ಲ. ಅವನ ಗತಿ ನಮಗೆ ತಿಳಿದೇ ಇದೆ. ನಮ್ಮದಲ್ಲದ ವಸ್ತುಗಳ ಬಗ್ಗೆ ಆಸೆ ಪಡಬಾರದು, ಭಯ ಪಡಬೇಕು ಎಂದು ಬಸವಣ್ಣನವರು ಹೇಳುತ್ತಾರೆ.

೨೦. ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವರು!
ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯನ್ನಿಕ್ಕಬೇಡ!
ಆನೆಯ ಮೇಲೆ *ಹೋಹನ *ಶ್ವಾನ ಕಚ್ಚಬಲ್ಲದೆ
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

* ಹೋಹನ= ಹೋಗುವವನ, ಶ್ವಾನ= ನಾಯಿ

ನಮ್ಮ ಬಗ್ಗೆ ಯಾರು ಕೋಪ ಮಾಡಿಕೊಂಡರೂ ನಾವು ಹೆದರ ಬೇಕಾಗಿಲ್ಲ. ನಮಗೆ ನಮ್ಮ ಬಗ್ಗೆ ವಿಶ್ವಾಸವಿರಬೇಕು. ನಮ್ಮ ಬಗ್ಗೆ ವಿನಾಕಾರಣ ಯಾರು ಮುನಿದರೂ ನಾವು ಅಂಜುವ ಕಾರಣವಿಲ್ಲ ಎಂದು ಬಸವಣ್ಣನವರು ಹೇಳುತ್ತಾರೆ.

೨೧. ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ;
ನೆರೆಮನೆಯವರ ದುಃಖಕ್ಕೆ ಅಳುವವರ
ಮೆಚ್ಚ ನಮ್ಮ ಕೂಡಲ ಸಂಗಮದೇವ.

ನಾವು ಮೊದಲು ನಮ್ಮ ದೇಹವನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ನಮ್ಮ ಮನಸ್ಸನ್ನು ಆರೋಗ್ಯವಾಗಿ ಇಟ್ಟುಕೊಳ್ಳಬೇಕು. ನಮ್ಮಲ್ಲಿ ಕೊಂಕು ಇರಬಾರದು. ನಾವೇ ಸರಿಯಿಲ್ಲದೆ ಲೋಕವನ್ನು ತಿದ್ದಲು ಹೋದರೆ ಫಲವಿಲ್ಲ. ನೆರೆ ಮನೆಯ ದುಃಖವನ್ನು ಆರಿಸಬೇಕು. ನಿಜ. ಮೊದಲು ನಮ್ಮ ಮನೆಯ, ಮನಸ್ಸಿನ ದುಃಖವನ್ನೂ ಕಳೆಯಬೇಕು.

೨೨. ಮೊಲೆ ಮೂಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ, ಹೆಣ್ಣೂ ಅಲ್ಲ ರಾಮನಾಥ.

ನೋಟಕ್ಕೆ ಗಂಡು ಹೆಣ್ಣು ಎಂಬ ವ್ಯತ್ಯಾಸ ಕಾಣುತ್ತದೆ. ಆದರೆ ಜೀವ

ಮಾತ್ರ ಇಬ್ಬರಿಗೂ ಒಂದೇ. ಹೀಗಿರುವಾಗ ಹೆಣ್ಣು ಎಂದರೆ ಕೀಳು ಎಂದು ತಿಳಿಯಬಾರದು. ಗಂಡು ಉತ್ತಮ ಎಂದು ಭಾವಿಸಬಾರದು. ಗಂಡು ಹೆಣ್ಣು ಸಮಾನರು ಎಂದು ಅರಿಯಬೇಕು. ಇದು ಜೇಡರ ದಾಸಿಮಯ್ಯನವರ ವಚನ.

೨೩. ಸಾವಿಲ್ಲದ ಕೇಡಿಲ್ಲದ *ರೂಹಿಲ್ಲದ ಚೆಲುವಂಗೆ ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಸೀಮೆ ಇಲ್ಲದ ನಿಸ್ಸೀಮಂಗೊಲಿದೆ ನಾನು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ

* ರೂಹು= ರೂಪು

ಅಕ್ಕಮಹಾದೇವಿಯು ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ತಿಳಿದವಳು. ಈ ಲೋಕದ ಗಂಡನಾದರೆ ಅವನ ಚೆಲುವು ಬೇಗ ಮಾಯವಾಗುತ್ತದೆ. ಅವನಿಗೆ ಭಯ ಇರುತ್ತದೆ. ಸಾವು ಇರುತ್ತದೆ. ಆದರೆ ಅಕ್ಕ ಒಲಿದ ಚೆನ್ನಮಲ್ಲಿಕಾರ್ಜುನನು ನಿಸ್ಸೀಮನಾದ ಚೆಲುವ. ಅವನಿಗೆ ಭಯ ಇಲ್ಲ. ಅವನಿಗೆ ಸಾವು ಇಲ್ಲ. ನಾನು ಅವನನ್ನು ಒಲಿದಿದ್ದೇನೆ ಎನ್ನುತ್ತಾಳೆ ಅಕ್ಕ.

೨೪. ಬೆಟ್ಟದ ಮೇಲೊಂದು ಮನೆಯಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯಮಾಡಿ

ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವಾ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಬೆಟ್ಟದ ಮೇಲೆ ನಮ್ಮ ಮನೆಯನ್ನು ಕಟ್ಟಿಕೊಂಡರೆ ಪ್ರಾಣಿಗಳಿಗೆ ನಾವು ಅಂಜಬಾರದು. ಸಮುದ್ರದ ತಡಿಯಲ್ಲಿ ನಮ್ಮ ಮನೆಯನ್ನು ಮಾಡಿಕೊಂಡರೆ ಅಲೆಗಳಿಗೆ ಹೆದರಬಾರದು. ಸಂತೆಯಲ್ಲಿ ನಮ್ಮ ಮನೆ ಇದ್ದರೆ ಶಬ್ದಕ್ಕೆ ನಾಚಬಾರದು. ಹಾಗೆಯೇ ಈ ಲೋಕದಲ್ಲಿ ನಮ್ಮನ್ನು ಹೊಗಳಲಿ, ನಿಂದಿಸಲಿ ನಮ್ಮ ಸಮಾಧಾನವನ್ನು ಕಳೆದುಕೊಳ್ಳಬಾರದು. ಸಮಾಧಾನವೇ ಮುಖ್ಯ ಎಂದು ಅಕ್ಕ ಹೇಳುತ್ತಾಳೆ.

೨೫. *ಬರುಸಟೆಗನ ಭಕ್ತಿ ದಿಟವೆಂದು ನಚ್ಚಲು ಬೇಡ:
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ ರಾಮನಾಥ.

* ಬರುಸಟೆಗ= ಸುಳ್ಳುಗಾರ, ನಚ್ಚು=ನಂಬು

ಭಕ್ತಿ ಇದೆ ಎಂದು ನಟಿಸುವುದು ಸುಲಭ. ತೋರಿಕೆಯ ಭಕ್ತಿಯನ್ನು ನಂಬಬಾರದು. ಮಠದಲ್ಲಿರುವ ಬೆಕ್ಕು ಭಕ್ತನೇ? ಇಲಿ ಕಂಡ ಕೂಡಲೆ ಕೊಂದು

ತಿನ್ನುತ್ತದೆ. ಸುಳ್ಳು ಭಕ್ತಿ ಪತ್ತೆಯಾಗಿಬಿಡುತ್ತದೆ. ಇದು ಜೇಡರ ದಾಸಿಮಯ್ಯನವರ ವಚನ.

೨೬. ಮಾಡಿ ಮಾಡಿ ಕೆಟ್ಟರೋ ಮನವಿಲ್ಲದೆ
ನೀಡಿ ನೀಡಿ ಕೆಟ್ಟರೋ ನಿಜವಿಲ್ಲದೆ
ಮಾಡುವ ನೀಡುವ ನಿಜಗುಣ ಉಳ್ಳೊಡೆ
*ಕೂಡಿಕೊಂಡಿರ್ಪ ನಮ್ಮ ಕೂಡಲಸಂಗಮದೇವ.

* ಕೂಡಿಕೊಂಡಿರ್ಪ= ಕೂಡಿಕೊಂಡಿರುತ್ತಾನೆ.

ಮನಸ್ಸಿಲ್ಲದೆ ಮಾಡುವ ಕೆಲಸದಿಂದ ಫಲವಿಲ್ಲ. ಮನಸ್ಸಿಲ್ಲದೆ ನೀಡುವ ದಾನದಿಂದ ಫಲಫಿಲ್ಲ. ಏನೇ ಮಾಡಿದರೂ, ಏನೇ ನೀಡಿದರೂ ನಿಜದ ಗುಣ ಇರಬೇಕು. ನಮ್ಮಲ್ಲಿ ನಿಜವಿದ್ದಾಗ ದೇವರೂ ನಮ್ಮೊಡನೆ ಇರುತ್ತಾನೆ ಎಂದು ಬಸವಣ್ಣನವರು ಹೇಳುತ್ತಾರೆ.

೨೭. ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಸೂಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು
ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ

ಈ ಭೂಮಿ, ಈ ಗಾಳಿ, ಈ ನೀರು ಎಲ್ಲರಿಗೂ ಸೇರಿದ್ದು. ಇವೆಲ್ಲಾ ಮನುಷ್ಯರಿಗೆ ದಾನವಾಗಿ ಬಂದಿವೆ. ಇವೆಲ್ಲಾ ನನ್ನದೇ ಎಂದು ಹಕ್ಕು ಸಾಧಿಸುವುದು ಸರಿಯೇ? ಅಥವಾ ನನಗೆ ಇವನ್ನೆಲ್ಲಾ ಕೊಡಿಸಿದ ಎಂದು ನನ್ನಂತಹ ಇನ್ನೊಬ್ಬ ಮನುಷ್ಯನನ್ನು ಓಲೈಸುವುದು ಸರಿಯೇ? ಎಂದು ದಾಸಿಮಯ್ಯ ಕೇಳುತ್ತಾನೆ.

೨೮. ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ:
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ

ದಯೆಯೇ ಧರ್ಮದ ಬೇರು. ಕೋಪ, ದ್ವೇಷಗಳು ಯಾವಕಾರಣಕ್ಕೂ ನಮ್ಮನ್ನು ಉದ್ಧಾರ ಮಾಡುವುದಿಲ್ಲ. ದಯೆ ಇಲ್ಲದೆ ಇನ್ನು ಯಾವ ರೀತಿ ಬದುಕಿದರೂ ದೇವರು ಒಪ್ಪುವುದಿಲ್ಲ.

೨೯. ಕಳಬೇಡ, ಕೊಲಬೇಡ;ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ;
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ

ಬಸವಣ್ಣನವರು ಈ ವಚನದಲ್ಲಿ ನಮ್ಮ ಬದುಕಿಗೆ ದಾರಿ ತೋರುವ ಮಾತುಗಳನ್ನು ಹೇಳಿದ್ದಾರೆ. ಕಳ್ಳತನಮಾಡಬಾರದು, ಕೊಲ್ಲಬಾರದು, ಸುಳ್ಳು ಹೇಳಬಾರದು. ಇತರರ ಬಗ್ಗೆ ಕೋಪ ಮತ್ತು ಅಸಹ್ಯ ಇರಬಾರದು. ನಮ್ಮನ್ನು ನಾವು ಹೊಗಳಿಕೊಳ್ಳಬಾರದು. ಇನ್ನೊಬ್ಬರನ್ನು ಹಳಿಯಬಾರದು. ಹೀಗೆ ಬದುಕಿದರೆ ನಮ್ಮ ಬಾಳು ಶುದ್ಧವಾಗಿರುತ್ತದೆ. ಎಲ್ಲರಿಗೂ ಸುಖ ದೊರೆಯುತ್ತದೆ.

೩೦. ಹಬ್ಬಕ್ಕೆ ತಂದ ಹರಕೆಯ ಕುರಿ

ತೋರಣಕ್ಕೆ ತಂದ ತಳಿರ ಮೇಯಿತ್ತು.

*ಕೊಂದಹರೆಂಬುದನರಿಯದೆ

ಬೆಂದ ಒಡಲ ಹೊರೆವುತ್ತಲದೆ.

ಅಂದಂದೆ ಹುಟ್ಟಿತ್ತು, ಅಂದಂದೆ ಹೋಯಿತ್ತು.

ಕೊಂದವರುಳಿವರೆ ಕೂಡಲ ಸಂಗಮದೇವಾ.

* ಕೊಂದಹರೆಂಬುದನರಿಯದೆ = ಕೊಲ್ಲುವರೆಂದು ತಿಳಿಯದೆ

ನಾವು ಬದುಕಬೇಕೆಂದು ಇನ್ನೊಂದು ಜೀವವನ್ನು ಕೊಲ್ಲುವುದು ತಪ್ಪು. ಯಾವಾಗಲೂ ಏನೂ ಅರಿಯದ ಜೀವಗಳೇ ಬಲಿಯಾಗುವುದು. ಕುರಿಯನ್ನು ಬಲಿಕೊಡಲು ತಂದಿದ್ದಾರೆ. ಅದಕ್ಕೆ ಜೀವ ಹೋಗುವುದೆಂದು ತಿಳಿದಿಲ್ಲ. ಅಲ್ಲಿದ್ದ ತೋರಣಕ್ಕೆಂದು ತಂದ ಎಲೆಯನ್ನು ತಿನ್ನುತ್ತಿದೆ. ಸದ್ಯದ ಹಸಿವನ್ನು ನೀಗಿಸಿಕೊಳ್ಳುವುದೇ ಕುರಿಗೆ ಮುಖ್ಯವಾಗಿ ಕಾಣುತ್ತಿದೆ. ಅದಕ್ಕೆ ಸಾವಿನ ಯೋಚನೆ ಇಲ್ಲ. ಎಂಥ ಏನೂ ಅರಿಯದ ಜೀವವನ್ನು ಕೊಲ್ಲುವುದು ಏಕೆ ? ಹಾಗೆ ಕೊಲೆ ಮಾಡಿದ ಮನುಷ್ಯರಾದರೂ ಸದಾಕಾಲ ಸಾಯದೆ ಉಳಿಯುವರೇ? ಬುದ್ಧಿ ಇರುವ ಮನುಷ್ಯ ತನ್ನ ಹಿತಕ್ಕೆ ಇತರರ ಜೀವ ತೆಗೆಯಬಾರದು. ಪೂಜೆಯ ಹೆಸರಿನಲ್ಲಿ ಜೀವ ತೆಗೆಯುವುದು ತಪ್ಪು. ಇದು ಬಸವಣ್ಣನವರ ಬೋಧನೆ.

೩೧. ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು?

ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?

ಪಶಿವ ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ

ಕೂಡಲಸಂಗಮದೇವಾ.

ಮನುಷ್ಯರು ಮಾತ್ರ ತಮ್ಮನ್ನು ತಾವು ಭಕ್ತರೆಂದುಕೊಳ್ಳುತ್ತಾರೆ. ಒಂದು ಅಗುಳು ಅನ್ನ ಕಂಡರೆ ಕಾಗೆ ಕರೆಯುತ್ತದೆ. ಒಂದು ಕಾಳು ಕಂಡರೆ ಕೋಳಿ ತನ್ನ ಕುಲವನ್ನೆಲ್ಲ ಕರೆಯುತ್ತದೆ. ಈ ಪ್ರಾಣಿಗಳು ಹಂಚಿ ತಿನ್ನುತ್ತವೆ. ಅವೇನೂ ಭಕ್ತರಲ್ಲ. ಆದರೆ ಮನುಷ್ಯರಾಗಿ ಭಕ್ತರೆಂದುಕೊಳ್ಳುವವರು ಹೀಗೇಕೆ ಮಾಡುವುದಿಲ್ಲ? ಇರುವುದನ್ನು ಹಂಚಿಕೊಳ್ಳದೆ ಎಲ್ಲವೂ ನನಗೇ ಇರಲಿ ಅನ್ನುವುದು ಮನುಷ್ಯರಿಗೆ ತಕ್ಕದ್ದಲ್ಲ. ಹಾಗನ್ನುವವರು ಭಕ್ತರಲ್ಲ ಎನ್ನುತ್ತಾರೆ ಬಸವಣ್ಣನವರು.

೩೨. ಮನಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ ?

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ *ರಜತುಂಬಿ,

ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೊ ?

ತನುವಿನಲ್ಲಿ ಹುಸಿತುಂಬಿ, ಮನದೊಳಗೆ *ವಿಷಯ ತುಂಬಿ

ಮನದೊಳಗೆ ಮನದೊಡೆಯನಿದ್ದಾನೋ, ಇಲ್ಲವೊ ?

ಇಲ್ಲ, ಕೂಡಲಸಂಗಮದೇವಾ.

* ರಜ = ಧೂಳು ; ವಿಷಯ = ಆಸೆ, ಲೋಭ, ಕಾಮ ಮುಂತಾದವುಗಳು.

ನಮ್ಮ ದೇಹವೇ ಒಂದು ಮನೆ ಇದ್ದ ಹಾಗೆ ಇದೆ. ಆದರೆ ಮನೆಯಲ್ಲಿ ಮನೆಯ ಯಜಮಾನ ಇದ್ದಾನೆಯೇ? ಮನೆಯ ತುಂಬ ಧೂಳು ತುಂಬಿದೆ. ಹೊಸ್ತಿಲ ಮೇಲೆ ಹುಲ್ಲು ಬೆಳೆದಿದೆ. ಮನೆಯಲ್ಲಿ ಒಡೆಯ ಇಲ್ಲ. ಹಾಗೆಯೇ ನಮ್ಮ ದೇಹದ ತುಂಬ ಸುಳ್ಳು ತುಂಬಿದೆ. ಮನಸ್ಸಿನ ತುಂಬ ಆಸೆಗಳು ತುಂಬಿವೆ. ಮನಸ್ಸಿನ ಯಜಮಾನ ಇದ್ದಾನೆಯೇ ? ಹಾಳುಬಿದ್ದ ಮನೆಯಲ್ಲಿ ಮನೆಯ ಒಡೆಯ ಇಲ್ಲ. ಶುದ್ಧವಾದ ಮನಸ್ಸು, ಶುಚಿಯಾದ ದೇಹ ಇಲ್ಲದಿದ್ದಾಗ ಅಲ್ಲಿ ದೇವರೂ ಇಲ್ಲ.

* * *

ಕನ್ನಡ ವಿಶ್ವವಿದ ... ುಟ್ಟದವರೆಗೆ ಉತ್ತಮ ಹಾಗೂ ಉಪ ... 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ... ಪಠ್ಯಪುಸ್ತಕ ರಚನೆ ಮಾಡಬೇಕೆಂದು ... ನವಸಾಕ್ಷರರಿಗಾಗಿ ಪುಸ್ತಕ ಬರೆಸು ... ಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯ ... ಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು ... ರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರ ... ಮುದ್ರಣ ವಿನ್ಯಾಸ, ಚಿತ್ರಗಳ ಮಹ ... ನೇಕ ಸಲ ಚರ್ಚಿಸಿ ಯೋಜನೆಯನ್ನು ...

ನವಸಾಕ್ಷರರಿಗಾಗಿ ... ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ... ಭಾಷಾತಜ್ಞರಿಂದ ಪರಿಶೀಲಿಸಲಾಯಿ ... ಸಿಕೊಂಡು ಅವರಿಗೆ ಕಮ್ಮಟಗಳನ್ನು ... ತ ಆಯ್ದ ಜಿಲ್ಲೆ, ತಾಲೂಕುಗಳಿಗೆ ... ರುವವರಿಂದ ಅದರ ಗುಣದೋಷಗಳ ... ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ... ಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ... ಣವಾಗಿ ವಿಷಯದ ಆದ್ಯತೆಗಳನ್ನು ನಿ ... ಲೇಖಕರು ನಮ್ಮ ವಿಶ್ವವಿದ್ಯಾಲಯದ ... ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು